ಬ್ಯಾಂಕುಗಳಲ್ಲಿ ಎಷ್ಟು ಜನರಿಗೆ ಅಪಾಯಿಂಟ್‌ಮೆಂಟ್ ಆಗಿದೆ ಎನ್ನುತಕ್ಕಂಥಾದ್ದು ಲಭ್ಯವಿಲ್ಲ ಎಂದು ಹೇಳಿದ್ದೇನೆ. ಆದೇಶ ಕೊಡುತ್ತಾ ಇದ್ದೇನೆ. ಈ ಅಂಕಿಸಂಖ್ಯೆಗಳನ್ನೂ ಕೂಡ ನೋಂದಾಪಣೆ ಮಾಡ ಬೇಕು ಎಂದು. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಮಾಡುತ್ತೇನೆ. ಆಮೇಲೆ ಉದ್ಯೋಗಾವಕಾಶ ಕೊಡಬೇಕು ಎಂದು ಜನರಲ್ಲಾಗಿ ಕೇಳುತ್ತಿದ್ದಾರೆ. ಅದು ಈ ಇಲಾಖೆಗೆ ಸಂಬಂಧವಿಲ್ಲತಕ್ಕಂಥ ಪ್ರಶ್ನೆ ಎಂದು ಮಾನ್ಯ ಬೊಮ್ಮಾಯಿಯವರು ಹೇಳಿದ್ದಾರೆ. ಆದಕ್ಕೋಸ್ಕರ ನಾನು ಹೇಳಿದೆ, ಇದರಲ್ಲಿ, ಎಲ್ಲರೂ ಕೆಲಸವಿಲ್ಲದೆ ಇಲ್ಲ ಎಂದು.

ಆಡಳಿತ ಮಂಡಳಿಗಳ ವಜಾ

೮೯೩ (೨೭೬೫) ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿರುವ ಒಟ್ಟು ಸಹಕಾರಿ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ?

ಆ) ಆ ಪೈಕಿ ವಜಾ ಮಾಡಲಾಗಿರುವ ಆಡಳಿತ ಮಂಡಳಿಗಳ ಸಂಖ್ಯೆ ಎಷ್ಟು ? ಅದಕ್ಕೆ ಕಾರಣಗಳೇನು? (ವಿವರ ನೀಡುವುದು)

ಇ) ಇದೇ ರೀತಿಯ ಆಡಳಿತ ಮಂಡಳಿಯು ರದ್ದಾಗಿದ್ದು ರಾಯಭಾಗ ಕಾರ್ಖಾನೆಯನ್ನು ರಾಜ್ಯ ಸಭಾ ಚುನಾವಣೆಯ ಸಂದರ್ಭದಲ್ಲಿ ಆದ ರದ್ದತಿಯನ್ನು ಹಿಂದಕ್ಕೆ ಪಡೆದಿರುವುದು ನಿಜವೇ ?

ಈ) ಹಾಗಿದ್ದಲ್ಲಿ ೭೦ ಲಕ್ಷ ಲಾಭ ಪಡೆದಿರುವ ಭದ್ರಾ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯನ್ನು ಮುಂದುವರಿಸಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಆರ್. ಬಿ. ಪೋತದಾರ್ (ಕೈಗಾರಿಕಾ ಸಹಕಾರ ಮಂತ್ರಿಗಳು).—

ಅ) ರಾಜ್ಯದಲ್ಲಿ ಒಟ್ಟು ೧೮ ಸಹಕಾರಿ ಸಕ್ಕರೆ ಕಾರ್ಖಾನೆಗಳಿದ್ದು ಇವುಗಳ ಪೈಕಿ ೧೪ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ.

ಆ) ರಾಜ್ಯದಲ್ಲಿರುವ ೧೮ ಸಹಕಾರಿ ಸಕ್ಕರೆ ಕಾರ್ಖಾನೆಗಳ ಪೈಕಿ ಈ ಕೆಳಕಂಡ ಮೂರು ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿಗಳಿಗೆ ವಿಶೇಷಾಧಿಕಾರಿಗಳನ್ನು ನೇಮಿಸುವುದರ ಮೂಲಕ ಆಡಳಿತವನ್ನು ಸರ್ಕಾರ ವಹಿಸಿಕೊಂಡಿರುತ್ತೆ.

೧) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ.

೨) ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ.

೩) ಕಂಪ್ಲಿ ಸಹಕಾರಿ ಸಕ್ಕರೆ ಕಾರ್ಖಾನೆ.

ಮೇಲ್ಕಾಣಿಸಿದ ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿಯನ್ನು ವಹಿಸಿಕೊಂಡಿದಕ್ಕೆ ಕಾರಣ ಈ ಕೆಳಕಂಡಂತೆ ಇವೆ:

೧) ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆ:

ಕಾರ್ಖಾನೆಯು ೧೯೮೪-೮೫ ಮತ್ತು ೧೯೮೫-೮೬ನೇ ಆಡಿಟ್ ವರದಿಯಲ್ಲಿ ಕಾರ್ಖಾನೆಯ ಆಡಳಿತ ವೈಖರಿ ಬಗ್ಗೆ ಹಲವಾರು ನ್ಯೂನತೆಗಳನ್ನು ಕಂಡುಹಿಡಿಯಲಾಗಿದೆ.

೨) ಕಾರ್ಖಾನೆಯ ಆಡಳಿತ ಮಂಡಳಿಯ ಮೇಲೆ ೨೩ ಆರೋಪಗಳಿದ್ದು ಇವರ ಬಗ್ಗೆ ಆಡಳಿತ ಮಂಡಳಿಗೆ ಒಂದು ಷೋಕಾಷ್ ನೋಟೀಸ್ ನೀಡಲಾಗಿದೆ. ಆಡಳಿತ ಮಂಡಳಿಯು ಸದರಿ ಷೋಕಾಷ್ ನೋಟೀಸಿಗೆ ನೀಡಿದ ಉತ್ತರವನ್ನು ಪರೀಕ್ಷಿಸಲಾಗಿ ಆರೋಪಗಳು ಬಹಳ ತೀವ್ರ ಸ್ವರೂಪದಾಗಿದ್ದರಿಂದ ಸಮಾಯೋಚಿತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಕೇಳಿ ಕೊಳ್ಳಲಾಯಿತು.

೩) ಆಡಳಿತ ಮಂಡಳಿಯವರ ಕೋರಿಕೆ ಮೇರೆಗೆ ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯನ್ನು ವಿಶೇಷ ಅಧಿಕಾರಿಯು ನೇಮಕ ಮಾಡುವುದರ ಮೂಲಕ ಸರ್ಕಾರ ತೆಗೆದುಕೊಂಡಿದೆ.

ಳ) ೧೯೮೪-೮೫ ರಲ್ಲಿ ಕಾರ್ಖಾನೆಯನ್ನು ಗಂಗಾಪತಿ ಸಕ್ಕರೆ ಕಾರ್ಖಾನೆಗೆ ಗುತ್ತಿಗೆ ಆಧಾರದ ಮೇಲೆ ನೀಡಿದಾಗ ಸರ್ಕಾರವು ಜಿಲ್ಲಾಧಿಕಾರಿಯನ್ನು ವಿಶೇಷಾಧಿಕಾರಿಯಾಗಿ ನೇಮಿಸಿದೆ.

ಇ) ಸರ್ಕಾರವು ಕ್ರಮ ಸಂಬಂಧಿ ತೊಂದರೆಗಳ ಸಲುವಾಗಿ ರಾಯಭಾಗ ಸಹಕಾರ ಸಕ್ಕರೆ ಕಾರ್ಖಾನೆಯ ರದ್ದು ಪಡಿಸಿದ ಆದೇಶವನ್ನು ಹಿಂತೆಗೆದುಕೊಳ್ಳಲಾಗಿದೆ ಆದಾಗ್ಯೂ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ ೬೪ರ ಪ್ರಕಾರ ವಿಚಾರಣೆಯನ್ನು ನಡೆಸಲು ಆದೇಶಿಸಿದೆ, ವಿಚಾರಣೆ ಮುಗಿದ ನಂತರ ತತ್ ಸಂಬಂಧವಾಗಿ ಮುಂದಿನ ಕ್ರಮ ಜರುಗಿಸಲಾಗುವುದು.

ಈ) ಲೆಕ್ಕ ಪರಿಶೋಧನಾ ವರದಿಯಲ್ಲಿನ ಅವ್ಯವಹಾರಗಳ ಆಧಾರದ ಮೇಲೆ ಭದ್ರಾಸಹಕಾರ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯನ್ನು ರದ್ದುಪಡಿಸಿದೆ ಆಡಳಿತ ಮಂಡಳಿಯನ್ನು ಮುಂದು ವರಿಸಲು ಸಾಧ್ಯವಾಗುವುದಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಶ್ರೀ ಆರ್. ರಾಮಯ್ಯನವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ೨೬೬೫ನೇ ಪ್ರಶ್ನೆ ಕೇಳುತ್ತೇನೆ.

ಶ್ರೀ ಆರ್. ಬಿ. ಫೋತ್‌ದಾರ್.—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಒಟ್ಟು ೧೮ ಕೋ ಆಪರೇಟೀವ್ ಶುಗರ್ ಫ್ಯಾಕ್ಟರೀಸ್ ಇವೆ. ಈಗ ೧೦ ವರ್ಕಿಂಗ್ ಇದೆ. ಭದ್ರಾ ಕೋಆಪರೇಟೀವ್ ಶುಗರ್ ಫ್ಯಾಕ್ಟರಿಗೆ ಸ್ಪೆಷಲ್ ಆಫೀಸರನ್ನು ನೇಮಿಸಿದೆವು. ವಾಣಿವಿಲಾಸ ಕೋಆಪರೇಟೀವ್ ಶುಗರ್ ಫ್ಯಾಕ್ಟರಿಗೆ ಸ್ಪೆಷಲ್ ಆಫೀಸರನ್ನು ನೇಮಿಸಿದೆವು. ಕಂಪ್ಲಿ ಕೋ ಆಪರೇಟೀವ್ ಶುಗರ್ ಫ್ಯಾಕ್ಟರಿಗೆ ಸ್ಪೆಷಲ್ ಆಫೀಸರನ್ನು ನೇಮಿಸಿದೆವು. ಭದ್ರ ಫ್ಯಾಕ್ಟರಿಯ ೧೯೮೪-೮೫ ಮತ್ತು ೧೯೮೫-೮೬ರ ಆಡಿಟ್ ರಿಪೋರ್ಟ್‌ನಲ್ಲಿ ಸೀರಿಯಸ್ ಇರ್‌ಗ್ಯುಲಾರಿಟೀಸ್ ಸಮಾಗೆ ಕಂಡುಬಂದಿತ್ತು. ಆವರಿಗೆ ನಾವು ಷೋಕಾಸ್ ನೋಟೀಸ್ ಕೊಟ್ಟೆವು. ಷೋಕಾಸ್ ನೋಟೀಸ್‌ಗೆ ಅವರು ಉತ್ತರವನ್ನು ಕೊಟ್ಟರು. ಡೈರೆಕ್ಟರ್ ಆಫ್ ಶುಗರ್‌ದು ರಿಮಾರ್ಕ್ಸ್ ನಾವೆಲ್ಲಾ ಎಕ್ಸಾಮಿನ್ ಮಾಡಿದೆವು, ಮತ್ತೆ ಅಲಿಗೇಷನ್ ಎಲ್ಲಾ ಸೀರಿಯಸ್ ಇದ್ದಕಾರಣ ಮ್ಯಾನೇಜ್‌ಮೆಂಟನ್ನು ಟೇಕ್ ಓವರ್ ಮಾಡಿದೆವು. ಅಲ್ಲಿ ಮಿಷನರಿ ವಗೈರೆ ಬಹಳ ಓಲ್ಡ್ ಆಗಿತ್ತು. ಮತ್ತೆ ಇತರ ಮೇಟೆನೆನ್ಸ್ ಹೆಚ್ಚಾದ ಕಾರಣ ನಾವು ಸ್ಪೆಷಲ್ ಆಫೀಸರನ್ನು ನೇಮಿಸಿದೆವು. ಮತ್ತೆ ವಾಣಿವಿಲಾಸ ಶುಗರ್ ಫ್ಯಾಕ್ಟರಿಗೂ ನಾವು ಸ್ಪೆಷಲ್ ಆಫೀಸರನ್ನು ನೇಮಿಸಿದೆವು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರ ರಾಜಕೀಯ ದುರುದ್ದೇಶದಿಂದ ಕೂಡಿದೆ ಎಂದು ಹೇಳಬೇಕಾಗಿದೆ. ರಾಯಬಾಗ್ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಸೂಪರ್‌ಸೀಡ್ ಮಾಡಿ, ವಾಪಸ್ ಕೊಟ್ಟಿದ್ದಾರೆ. ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸೂಪರ್ ಸೀಡ್ ಮಾಡಿ, ಅಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತ ಮಂಡಳಿ ಇರುವುದರಿಂದ, ಆ ಆಡಳಿತ ಮಂಡಳಿಯನ್ನು ಮಜಾ ಮಾಡಿ, ಆಡಳಿತಾಧಿಕಾರಿಗಳನ್ನು ಹಾಕಿದ್ದಾರೆಂದು ಆರೋಪ ಮಾಡುತ್ತಿದ್ದೇನೆ. ಭದ್ರಾ, ವಾಣಿವಿಲಾಸ, ಕಂಪ್ಲಿ ಸಹಕಾರ ಸಕ್ಕರೆ ಕಾರ್ಖಾನೆಗಳಲ್ಲಿ ಒಟ್ಟು ಲಾಸ್ ಎಷ್ಟು ಆಗಿದೆ ? ಆ ಆಡಳಿತ ಮಂಡಳಿಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ? ಕ್ರಿಮಿನಲ್ ಕೇಸ್ ಹಾಕುತ್ತೀರಾ ? ಕೊಳ್ಳೇಗಾಲ ಸಹಕಾರ ಸಕ್ಕರೆ ಕಾರ್ಖಾನೆಯತರಹ, ಮಾಡುವುದಾದರೆ, ಈ ಸದನದಲ್ಲಿರತಕ್ಕ ಶಾಸಕರ ಕಡೆಯಿಂದ ಪಂತಿಗೆ ವಸೂಲು ಮಾಡಿ, ಶಾಸಕಾಂಗ ಪಕ್ಷದ ಸಂಸ್ಥೆಯ ಆಡಿಯಲ್ಲಿ ಸಕ್ಕರೆ ಕಾರ್ಖಾನೆಗಳನ್ನು ನಡೆಸುತ್ತೀರಾ ?

ಶ್ರೀ ಆರ್. ಬಿ. ಫೋತ್‌ದಾರ್.—ಪಾರ್ಟಿ ಬೇಸಿಸ್‌ನಲ್ಲಿ ಮಾಡಿಲ್ಲ, ಅಂಥ ವಿಚಾರ ಎಂದೂ ನನ್ನ ತಲೆಯೊಳಗೆ ಬರುವುದಿಲ್ಲ. ಸೀರಿಯಸ್ ಇರ್ರೆಗ್ಯುಲಾರಿಟೀಸ್ ಇದ್ದುದರಿಂದ ಮಾಡಲಾಗಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇದೇರೀತಿಯ ಇರ್ರೆಗ್ಯುಲಾರಿಟೀಸ್‌ನ್ನು ರಾಯಭಾಗದ ಸಕ್ಕರೆ ಕಾರ್ಖಾನೆಯವರು ಮಾಡಿರಲಿಲ್ಲವೇ ?

ಶ್ರೀ ಆರ್. ಬಿ. ಫೋತ್‌ದಾರ್.—ಭದ್ರಾದಲ್ಲಿ ಸುಮಾರು ೭ ಕೋಟಿ ರೂಪಾಯಿಗಳು ಲಾಸ ಆಗಿದೆ. ರಾಯಬಾಗದ್ದು ಪ್ರೊಸೀಜರಲಿ ಡಿಫೆಕ್ಟ್ ಇತ್ತು. ಕೂಡಲೇ ರಿಪೋರ್ಟ್ ತರಿಸಿಕೊಂಡ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಸೂಪರ್‌ಸೀಡ್ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಆರ್.ಬಿ. ಪೋತ್‌ದಾರ್.—ಮಾನ್ಯ ಪುಲ್ಲಾರಿಗೌಡ ಪಾಟೀಲರು ಕಾಂಗ್ರೆಸ್ ಪಕ್ಷದ ಆಡಳಿತ ಮಂಡಳಿ ಇದ್ದುದರಿಂದ ಮಾಡಿದ್ದೀರೆಂದು ಹೇಳಿದರು, ಆರೋಪ ಮಾಡಿಲ್ಲ. ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆಯ ಮಾನ್ಯ ಶಿವಪ್ಪನವರು ಮತ್ತು ಡೈರೆಕ್ಟರುಗಳು ಹಾಗೂ ಕೆಲಸಗಾರರು ಬಿಟ್ಟುಕೊಡ ಬೇಕೆಂದು ಒತ್ತಾಯ ಮಾಡಿದ್ದಾರೆ. ಆ ವಿಚಾರದಲ್ಲಿ ಸೀರಿಯಸ್ಸಾಗಿ ಕನ್ಸೀಡರ್ ಮಾಡುತ್ತೇನೆ.

ಶ್ರೀ ಪುಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಹಿರಿಯ ಸದಸ್ಯರಾದ ಶ್ರೀ ಕೆ. ಹೆಚ್. ಪಾಟೀಲರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಇದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಇಡುತ್ತೇನೆಂದು ಕೂಡ ಅವರು ಹೇಳಿದ್ದರು. ರಾಯಭಾಗದ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸೂಪರ್‌ಸೀಡ್ ಮಾಡಿ, ತದನಂತರ ಅದೇ ಮ್ಯಾನೇಜ್‌ಮೆಂಟ್‌ಗೆ ಒಪ್ಪಿಸಿದ್ದೀರಿ. ಆದರೆ, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ಕಾಂಗ್ರೆಸ್ ಪಕ್ಷದವರು ಇದ್ದಾರೆ. ಅವರ ಮೇಲೆ ಯಾವ ಆಲಿಗೇಷನ್ಸೂ ಇಲ್ಲ. ಚಾರ್ಜಸ್ ಮಾಡುವುದಕ್ಕೆ ನೆಪ ಹುಡುಕಬೇಕೆಂದರೆ ನೂರೆಂಟು ಸಿಗುತ್ತವೆ. ಪ್ರತಿಯೊಂದು ಸೊಸೈಟಿಯಲ್ಲಿ, ಸಂಸ್ಥೆಗಳಲ್ಲಿ ತಪ್ಪುಗಳು ಇರುತ್ತವೆ ಯಾವಗ್ರೌಂಡ್ಸ್ ಮೇಲೆ ಸೂಪರ್‌ಸೀಡ್ ಮಾಡಿದ್ದೀರಿ? ಸೂಪರ್‌ಸೀಡ್ ಮಾಡತಕ್ಕ ನೀತಿಯನ್ನು ಒಂದೇ ರೀತಿಯಾಗಿ ಏತಕ್ಕೆ ಅನ್ವಯಿಸುವುದಿಲ್ಲ? ಸೂಪರ್‌ಸೀಡ್ ಮಾಡಿದಮೇಲೆ ಒಬ್ಬರಿಗೆ ಕೊಡುವುದು, ಒಬ್ಬರಿಗೆ ಬಿಡುವುದು ಸರಿಯಲ್ಲ. ಸೂಪರ್‌ಸೀಡ್ ಮಾಡಿರುವುದರಿಂದ ಒಂದೆರಡು ತಿಂಗಳಲ್ಲಿ ಫ್ಯಾಕ್ಟರಿ ಸಂಪೂರ್ಣವಾಗಿ ಕೆಟ್ಟುಹೋಗುತ್ತದೆ. ಇದರಿಂದ ಮತ್ತೆ ತೊಂದರೆಯಾಗುವುದರಿಂದ, ತಾವು ಸ್ಪಷ್ಟವಾಗಿ ಉತ್ತರ ಕೊಡಬೇಕು.

೧೦-೩೦ ಎ. ಎಂ.

ಶ್ರೀ ಆರ್. ಬಿ. ಪೋತ್‌ದಾರ್.—ಅಲ್ಲಿಯವರೆಗೆ ೭ ಕೋಟಿ ರೂಪಾಯಿ ಲಾಸ್ ಆಗಿದೆ. ಮಾನ ಸದಸ್ಯರು ೭೦ ಲಕ್ಷ ರೂಪಾಯಿ ಪಾಯಿದೆ ಆಗಿದೆ ಎಂದು ಹೇಳಿದ್ದಾರೆ. ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ನನ್ನ ಕಡೆ ಇನ್ನೂ ಆಡಿಟ್ ರಿಪೋರ್ಟ್ ಬಂದಿಲ್ಲ. ನಾವು ಅನೇಕ ಫ್ಯಾಕ್ಟರಿಗಳಿಗೆ ನೋಟೀಸ್ ಕೊಟ್ಟಿದ್ದೇವೆ ಗೋಕಾಕ್‌ಗೆ ನೋಟೀಸ್ ಕೊಟ್ಟಿದ್ದೇವೆ, ರಾಯಭಾಗ್‌ಗೆ ನೋಟೀಸ್ ಕೊಟ್ಟಿದ್ದೇವೆ, ಹೇಮಾವತಿಗೆ ನೋಟೀಸ್ ಕೊಟ್ಟಿದ್ದೇವೆ, ಶ್ರೀರಾಮಕ್ಕೆ ನೋಟೀಸ್ ಕೊಟ್ಟಿದ್ದೇವೆ. ಈ ರೀತಿ ಎಲ್ಲಾ ಕಡೆಯಲ್ಲೂ ನೋಟೀಸ್ ಕೊಟ್ಟಿದ್ದೇವೆ. ಈಗ ಎಂದು ಡಿಮ್ಯಾಂಡ್ಸ್ ನನ್ನ ಕಡೆ ಇದೆ, ಛೇರ್‌ಮನ್ ಮತ್ತು ಡೈರೆಕ್ಟರ್ಸ್‌ಗಳು ಈ ಫ್ಯಾಕ್ಟರಿಯನ್ನು ಮತ್ತೆ ನಮ್ಮ ಕಡೆ ಕೊಡಿ ಎಂದು ಹೇಳಿದ್ದಾರೆ. ಪರ್ಕಾರ್ಸ್ ನಮ್ಮ ಕಡೆಗೆ ಬಂದು ಎಲೆಕ್ಷನ್ ಕರೆಯಿರಿ ಎಂದು ಹೇಳಿದ್ದಾರೆ. ಇದು ನನ್ನ ತಿಜ್ಞೆ ಗಮನದಲ್ಲಿದೆ, ಇದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸಿದ್ದವೀರಪ್ಪನವರು ಕಷ್ಟಪಟ್ಟು ಫ್ಯಾಕ್ಟರಿ ಪ್ರಾರಂಭ ಮಾಡಿಸಿದ್ದರು. ಆ ದೃಷ್ಟಿಯಿಂದಲಾದರೂ ತಾವು ಬೇಗ ಎಲೆಕ್ಷನ್ ಮಾಡಿಸಿ ಸರಿಯಾದಂಥ ವ್ಯವಸ್ಥೆ ಮಾಡಿ.

ಶ್ರೀ ಆರ್. ಬಿ. ಪೋತ್‌ದಾರ್.—ಆ ರೀತಿ ಮಾಡುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಪೂರ್ತಿ ಉತ್ತರವನ್ನು ಹೇಳಲಿಲ್ಲ ಈ ಮೂರು ಫ್ಯಾಕ್ಟರಿಗಳನ್ನು ಮಾರತಕ್ಕಂತಾದ್ದು ಏನಾದರೂ ಕಾರ್ಯಕ್ರಮ ಇದ್ದರೆ ತಿಳಿಸಬೇಕು. ಮೊದಲು ಶಾಸನ ಸಭಾ ಸದಸ್ಯರು ಒಂದೊಂದು ಸಾವಿರ ರೂಪಾಯಿ ಕಾಂಟ್ರಿಬ್ಯೂಷನ್ ಕಲೆಕ್ಟ್ ಮಾಡಲಿಕ್ಕೆ ಮುಂದಾಗಿದ್ದರು. ಈ ಸಹಕಾರಿ ಸಂಸ್ಥೆಗಳನ್ನು ಕಟ್ಟುವ ಕಾಲಕ್ಕೆ ಯಾರು ಯಾರು ಎಷ್ಟೆಷ್ಟು ತೊಂದರೆ ತೆಗೆದುಕೊಂಡು ಕಟ್ಟಿದರು ಎನ್ನುವುದನ್ನು ಸಹಕಾರಿ ಸಚಿವರು ಅರ್ಥಮಾಡಿ ಕೊಂಡಿಲ್ಲ ಬೇರೆಯವರಿಗೆ ಮಾರತಕ್ಕ ಕಾರ್ಯಕ್ರಮವನ್ನು ಸರ್ಕಾರದವರು ಮಾಡಿದ್ದರೆ ಅದನ್ನು ಖಂಡಿಸಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಸದ್ಯರು ಸಪ್ಲಿಮೆಂಟರಿ ಪ್ರಶ್ನೆ ಕೇಳಬೇಕು, ಖಂಡಿಸಬೇಕಾಗುತ್ತದೆ, ಮಂಡಿಸಬೇಕಾಗುತ್ತದೆ ಎನ್ನುವುದೆಲ್ಲಾ ಬೇಡ.

ಶ್ರೀ ಎಂ. ಎಸ್. ಪಾಟೀಲ್.—ಅಧ್ಯಕ್ಷರೆ, ಇವರು ತೆಗೆದುಕೊಂಡಿರತಕ್ಕದ್ದು ರಾಜಕೀಯ ನಿರ್ಣಯ. ಇವೊತ್ತು ಯೋಜನಾ ಸಚಿವರಾಗಿ ಮಾನ್ಯ ಬೊಮ್ಮಾಯಿಯವರಲ್ಲಿ ಕೇಳಲಿಕ್ಕೆ ಇಷ್ಟಪಡುತ್ತೇನೆ. ಈ ಸಹಕಾರಿ ಸಕ್ಕರೆ ಕಾರ್ಖಾನೆಗಳು ಏನಿವೆ ಅದನ್ನು ಸುಧಾರಿಸಲಿಕ್ಕೆ ನೀವು ಕಾರ್ಯಕ್ರಮ

ಏನು ತೆಗೆದುಕೊಂಡಿದ್ದೀರಿ. ಲುಕ್ಸಾನು ಮುತ್ತೊಂದು ಮಾಡಿರತಕ್ಕ ಆಡಳಿತ ಮಂಡಳಿಗಳಮೇಲೆ ಯಾವ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ಎನ್ನುವುದನ್ನು ತಿಳಿಸಬೇಕು.

(ಗೊಂದಲ)

ಶ್ರೀ ಆರ್. ಬಿ. ಪ್ರೋತ್‌ದಾರ್.—ತಾವು ಅಷ್ಟೊಂದು ಪ್ರಶ್ನೆ ಕೇಳಿದರೆ ನಾನು ಉತ್ತರ ಹೇಳಲಿಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಎಂ. ಎಸ್. ಪಾಟೀಲ್.—ಕೋಟ್ಯಾಂತರ ರೂಪಾಯಿ ಆಸ್ತಿ ಪ್ರಶ್ನೆ ಇದು.

ಶ್ರೀ ಎಸ್. ಆರ್. ಬೊಪ್ಪಾಯಿ.—ಈ ಸದನದಲ್ಲಿ ನಾನು ಈಗಾಲೇ ಉತ್ತರ ಹೇಳಿದ್ದೇನೆ. ನಷ್ಟ ಹೊಂದಿರತಕ್ಕ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಪುನರ್‌ಜ್ಜೀವನಗೊಳಿಸುವ ಬಗ್ಗೆ ಈಗಾಗಲೇ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದೇವೆ, ಎಕ್ಸ್‌ಪರ್ಟ್ ಒಪಿನಿಯನ್ ತೆಗೆದುಕೊಂಡಿದ್ದೇವೆ, ಆ ದಿಸೆಯಲ್ಲಿ ಹೆಜ್ಜೆ ಇಡುತ್ತೇವೆ. ಮಾನ್ಯ ಕೆ. ಹೆಚ್. ಪಾಟೀಲರು ಹೇಳಿದ ಹಾಗೆ ಈ ಚಳುವಳಿಯಲ್ಲಿರ ತಕ್ಕವರು ನಿಷ್ಪಾವಂತರಾಗಿ ಸರಿಯಾಗಿ ಕೆಲಸ ಮಾಡಿದರೆ ಈ ಸಂಸ್ಥೆಗಳು ಉದ್ಧಾರವಾಗುತ್ತವೆ. ಆ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.—ಸೆಕ್ಷನ್ ೬೪ರ ಪ್ರಕಾರ ಯಾವ ಯಾವ ಸಹಕಾರಿ ಸಕ್ಕರೆ ಕಾರ್ಖಾನೆಗಳ ಬಗ್ಗೆ ಎನ್‌ಕ್ವಯಿರಿ ನಡೆದಿದೆ ಅವುಗಳ ಹೆಸರುಗಳನ್ನು ತಿಳಿಸುತ್ತೀರಾ ?

ಶ್ರೀ ಆರ್. ಬಿ. ಪ್ರೋತ್‌ದಾರ್.—ಈಗ ರಾಯಭಾಗ್ ಹೆಸರು ಹೇಳಿದೆ. ತಾವು ಮುತ್ತೊಂದು ಪ್ರಶ್ನೆಯನ್ನು ಕೇಳಿದರೆ ಉತ್ತರ ಹೇಳುತ್ತೇನೆ.

ಅಂಗನವಾಡಿಗಳನ್ನು ತಾಲ್ಲೂಕುಗಳಲ್ಲಿ ಪ್ರಾರಂಭಿಸುವುದು

೯೯೪ (೨೭೫೯) ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಸಮಾಜಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅಂಗನವಾಡಿಗಳನ್ನು ನಡೆಸಲಾಗುತ್ತಿರುವ ತಾಲ್ಲೂಕುಗಳಾವುವು ಮತ್ತು ಪ್ರಸಕ್ತ ವರ್ಷ ಅಂಗನವಾಡಿಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿರುವ ತಾಲ್ಲೂಕುಗಳಾವುವು ?

ಆ) ರಾಜ್ಯದಲ್ಲಿರುವ ತರಬೇತಿ ಹೊಂದಿದ ನಿರುದ್ಯೋಗಿ ಅಂಗನವಾಡಿ ಶಿಕ್ಷಕಿಯರ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಉತ್ತರ ಕನ್ನಡ ಜಿಲ್ಲಾ ಪರಿಷತ್‌ನವರು ಬಾಲವಾಡಿಗಳನ್ನು ಡೆಸುತ್ತಿರುವ ಸಂಖ್ಯೆ ಎಷ್ಟು ?

ಈ) ಹೊನ್ನಾವರ ತಾಲ್ಲೂಕಿನಲ್ಲಿ ಕೇಂದ್ರ ಸರ್ಕಾರದ ಸಹಾಯದಿಂದ ಅಂಗನವಾಡಿಗಳನ್ನು ಪ್ರಾರಂಭಿಸಬೇಕೆಂದು ಉದ್ದೇಶಿಸಲಾಗಿರುವುದು ನಿಜವೇ ?

ಶ್ರೀ ಜಿ. ಬಸವಣಪ್ಪ (ಸಮಾಜ ಕಲ್ಯಾಣ ಸಚಿವರು).—

(ಅ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ಸೂಪಾ, ಮುಮಟಾ ಮತ್ತು ಯಲ್ಲಾಪುರ ತಾಲ್ಲೂಕುಗಳಲ್ಲಿ ಅಂಗನವಾಡಿಗಳನ್ನು (ಬಾಲವಿಕಾಸ ಯೋಜನೆಗಳನ್ನು) ನಡೆಸಲಾಗುತ್ತಿದೆ. ಪ್ರಸಕ್ತ ವರ್ಷ ಅಂಗನವಾಡಿಗಳನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರದಿಂದ ಆದೇಶ ನಿರೀಕ್ಷಿಸಲಾಗುತ್ತಿದೆ. ಯಾವ ಯಾವ ತಾಲ್ಲೂಕುಗಳಲ್ಲಿ ಅಂಗನವಾಡಿಗಳನ್ನು ಪ್ರಾರಂಭಿಸುವ ಬಗ್ಗೆ ನಿಖರವಾಗಿ ಇನ್ನೂ ತಿಳಿದು ಬಂದಿಲ್ಲ.

(ಆ) ಇಲ್ಲ.

(ಇ) ಈ ಇಲಾಖೆಗೆ ಅನ್ವಯಿಸುವುದಿಲ್ಲ. ಸಂಬಂಧಪಟ್ಟ ಇಲಾಖೆಯಿಂದ ಉತ್ತರ ತರಿಸಿ ಒದಗಿಸಲಾಗುವುದು.

(ಈ) ಇಲ್ಲ.